# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
# ಸ್ಪೆಷಲ್ ಎಸ್.ಸಿ./ಎಸ್.ಟಿ.28/2025

ಪಿರ್ಯಾದಿಃ ಹಲಗೇರಿ ಪೊಲೀಸ್ ಠಾಣೆ

**ವಿರುದ್ಧ**

ಆರೋಪಿತರುಃ
1. ಉಮೇಶ ಬೀರಪ್ಪ ಚೌಡಣ್ಣನವರ
ವಯಾಃ 33 ವರ್ಷ
2. ಬೀರಪ್ಪ ಬಸಪ್ಪ ಚೌಡಣ್ಣನವರ
ವಯಾಃ 66 ವರ್ಷ
ಇಬ್ಬರೂ ಸಾಃ ಹಾರೋಗೊಪ್ಪ ತಾಃ ರಾಣೇಬೆನ್ನೂರು.

## ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ದಿನಾಂಕಃ16.04.2025 ರಂದು ಹಾರೋಗೊಪ್ಪ ಗ್ರಾಮದ ಬಸವರಾಜ ಹನಮಪ್ಪ ಚೌಡಣ್ಣನವರ ರವರ ಮನೆಯ ಬಸವರಾಜ ಎಂಬ ಹುಡುಗ ಚಿತ್ರದುರ್ಗದ ಹತ್ತಿರ ಒಂದು ಹಳ್ಳಿಯಿಂದ ಒಂದು ಹುಡುಗಿಯನ್ನು ಲವ್ ಮಾಡಿ ಕರೆದುಕೊಂಡು ಬಂದಿದ್ದು, ಈ ಬಗ್ಗೆ ಅವರ ಪಾಲಕರು ಸಾಯಂಕಾಲ ಊರಿಗೆ ಬಂದು ಹಿರಿಯರ ಸಮಕ್ಷಮ ಪಂಚಾಯತಿ ಮಾಡಿ ಹುಡುಗಿಯನ್ನು ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ 1 ನೇ ಆರೋಪಿಯಾದ ನೀವು ಕುಡಿದು ಬಂದು ಗಲಾಟೆ ಮಾಡಿದ್ದು ಹಿರಿಯರೆಲ್ಲರೂ ಸೇರಿ ಬುದ್ದಿ ಹೇಳಿ ಕಳಿಸಿದ್ದು, ನಂತರ ಅದೇ ದಿನ ರಾತ್ರಿ 7.00 ಗಂಟೆ ಸುಮಾರಿಗೆ ಹಾರೋಗೊಪ್ಪ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದ ಕಟ್ಟೆಯ ಮೇಲೆ ಕುಳಿತುಕೊಂಡಿದ್ದ ಪಿರ್ಯಾದಿದಾರ ಭರಮಪ್ಪ ಹಾಲಪ್ಪ ಬಂಗೇರ ಇವರಿಗೆ ಆರೋಪಿತರಾದ ನೀವಿಬ್ಬರೂ ಸಮಾನ ಉದ್ದೇಶದಿಂದ ಬೋಸುಡಿ ಮಗನ, ನಿನ್ನ ತಾಯಿನಾ ಹಡಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ

ಮೂಲಕ ಆರೋಪಿತರಾದ ನೀವಿಬ್ಬರೂ ಬಿ.ಎನ್.ಎಸ್–2023 ಕಲಂ.352 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದಲ್ಲದೇ, 1ನೇ ಆರೋಪಿಯಾದ ನೀವು ಚಾಸಾ–1 ರವರ ಹಿಂದಿನಿಂದ ಹೋಗಿ ಕಲ್ಲಿನಿಂದ ಅವನ ತಲೆಗೆ ಹೊಡೆದು ಗಾಯಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ 118(1) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವು ಕುರುಬ ಜಾತಿಗೆ ಸೇರಿದ್ದು, ಚಾಸಾ–1 ರವರು ಹಿಂದೂ ವಾಲ್ಮೀಕಿ ಜಾತಿಗೆ ಸೇರಿದವರು ಎಂದು ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು, ಸಾರ್ವಜನಿಕ ಸ್ಥಳದಲ್ಲಿ ಕೀಳು ವಾಲ್ಮೀಕಿ ಜಾತಿ ಸೂಳೇ ಮಗನೇ ಅಂತಾ ಜಾತಿ ನಿಂದನೆ ಮಾಡಿ ಪರಿಶಿಷ್ಟ ಪಂಗಡಕ್ಕೆ ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ.3(1)(r) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲಿನ ಎಲ್ಲಾ ದೋಷಾರೋಪಣೆಗಳಿಗೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೊಳಪಡುತ್ತೀರ.

ದಿನಾಂಕ:07.08.2025
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು,
ಹಾವೇರಿ